# ಕರ್ನಾಟಕ ವಿಧಾನ ಪರಿಷತ್ತು

**1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1631(1839)

**2. ಮಾನ್ಯ ಸದಸ್ಯರ ಹೆಸರು** : ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ)

**3. ಉತ್ತರಿಸುವ ದಿನಾಂಕ** : 23.03.2026

**4. ಉತ್ತರಿಸುವ ಸಚಿವರು** : ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರಗಳು</th></tr>
<tr><td>ಅ</td><td>ಕಲಬುರಗಿ ಜಿಮ್ಸ್ ಆಸ್ಪತ್ರೆಯಲ್ಲಿ ಸರದಿ ಸಾಲಿನಲ್ಲಿ ನಿಂತು ಚೀಟಿ ಪಡೆಯಲು ಎರಡು ತಾಸು ಅಥವಾ ಅದಕ್ಕಿಂತ ಹೆಚ್ಚು ಸಮಯ ತಗಲುತ್ತಿದ್ದು ಕೌಂಟರ್ ಅಥವಾ ಆನ್ ಲೈನ್ ಮೂಲಕ ಚೀಟಿ ವಿತರಿಸಲು ಸರ್ಕಾರ ಚಿಂತಿಸಿದೆಯೇ;</td><td>ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆ, ಕಲಬುರಗಿ ಇಲ್ಲಿನ ಆಸ್ಪತ್ರೆ ಯಲ್ಲಿ ರೋಗಿಗಳಿಗೆ ಚೀಟಿ ಪಡೆಯಲು ಸಹಾಯವಾಗಲು ಈ ಕೆಳಕಂಡಂತೆ ಸೇವೆಗಳನ್ನು ನೀಡಲಾಗುತ್ತದೆ.
<table>
<tr><td>ನೆಲಮಹಡಿ<br>14 ಕೌಂಟರ್‌ಗಳು</td><td>5- ಕೌಂಟರ್ ಹೊರ ರೋಗಿಗಳಿಗಾಗಿ.<br>1- ಕೌಂಟರ್ ಒಳರೋಗಿಗಳಿಗಾಗಿ.<br>4-ಕೌಂಟರ್ ಬಿಲ್‌ಗಳ ಪಾವತಿಗಾಗಿ.<br>3-ಮರು ಚೀಟಿ ಕೌಂಟರ್‌ಗಳು.<br>1-ಮರುಪಾವತಿ ಕೌಂಟರ್‌ಗಳು.</td></tr>
<tr><td>ಮೂರನೇ ಮಹಡಿ<br>05 ಕೌಂಟರ್‌ಗಳು</td><td>1-ಕೌಂಟರ್ ಹೊರ ರೋಗಿಗಳಿಗಾಗಿ.<br>1-ಕೌಂಟರ್ ಒಳರೋಗಿಗಳಿಗಾಗಿ /ಬಿಲ್‌ಗಳ ಪಾವತಿಗಾಗಿ.<br>1-ಕೌಂಟರ್ ಶಿಶು ವೈದ್ಯಶಾಸ್ತ್ರ ವಿಭಾಗ ಒಳರೋಗಿಗಾಗಿ/ಬಿಲ್ ಪಾವತಿಗಾಗಿ<br>2-ಕೌಂಟರ್ ರೋಗಿಗಳು ಆಸ್ಪತ್ರೆಯಿಂದ ಬಿಡುಗಡೆಗಾಗಿ.</td></tr>
<tr><td>ಎಂಟನೇ ಮಹಡಿ<br>04 ಕೌಂಟರ್‌ಗಳು</td><td>2-ಕೌಂಟರ್ ಹೊರ ರೋಗಿಗಳಿಗಾಗಿ.<br>1-ಕೌಂಟರ್ ಒಳರೋಗಿಗಳಿಗಾಗಿ/ ಬಿಲ್‌ಗಳ ಪಾವತಿಗಾಗಿ.<br>1-ಕೌಂಟರ್ ರೋಗಿಗಳು ಆಸ್ಪತ್ರೆಯಿಂದ ಬಿಡುಗಡೆಗಾಗಿ.</td></tr>
<tr><td>ಟ್ರಾಮ ಕೇರ್ ಸೆಂಟರ್<br>04 ಕೌಂಟರ್‌ಗಳು</td><td>2- ಕೌಂಟರ್ ಹೊರರೋಗಿಗಳಿಗಾಗಿ.<br>1-ಕೌಂಟರ್ ಒಳರೋಗಿಗಳಿಗಾಗಿ/ಬಿಲ್‌ಗಳ ಪಾವತಿಗಾಗಿ.<br>1-ಕೌಂಟರ್ ರೋಗಿಗಳು ಆಸ್ಪತ್ರೆಯಿಂದ ಬಿಡುಗಡೆಗಾಗಿ.</td></tr>
</table>
ಕಳೆದ 08 ತಿಂಗಳಿಂದ ಎರಡು Online fastrack ಒಪಿಡಿ ಕೌಂಟರ್‌ಗಳನ್ನು ಪ್ರಾರಂಭಿಸಲಾಗಿದೆ.<br>
ಸಾಮಾನ್ಯ ಕೌಂಟರ್‌ಗಳಲ್ಲಿ ಒಂದು ಗಂಟೆಗೆ ಸರಾಸರಿ 70 ಹೊರ ರೋಗಿ ಚೀಟಿಗಳನ್ನು ನೀಡಲಾಗುತ್ತಿದೆ. Online fastrack ನಲ್ಲಿ 30-40 ಹೊರರೋಗಿಗಳ ಚೀಟಿ ನೀಡಲಾಗುತ್ತಿದೆ. ಒಂದು ದಿನಕ್ಕೆ ಸರಾಸರಿ 1400-1600 ಹೊರ ರೋಗಿಗಳಿಗೆ ಹಾಗೂ 100-200 ಒಳರೋಗಿಗಳಿಗೆ ಚೀಟಿಗಳನ್ನು ನೀಡಲಾಗುತ್ತಿದೆ.</td></tr>
<tr><td>ಆ</td><td>ತುರ್ತು ಸಮಯದಲ್ಲಿ ರೋಗಿಗಳಿಗೆ ಚಿಕಿತ್ಸೆ ಪಡೆಯಲು ವಿಳಂಬವಾಗುತ್ತಿರುವುದು ಹಾಗೂ ಬಹಳ ತೊಂದರೆಯಾಗುತ್ತಿದ್ದು, ಸದರಿ ಸಮಸ್ಯೆ ನಿವಾರಣೆಗೆ ಪರಿಹಾರ ಒದಗಿಸಲು ಸರ್ಕಾರ ಕ್ರಮ</td><td>ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆ, ಕಲಬುರಗಿಯಲ್ಲಿ ಟ್ರಾಮಾ ಕೇರ್ ಸೆಂಟರ್-1, ಜಿಮ್ಸ್ ಆಸ್ಪತ್ರೆ-1 ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ -1 ಹೀಗೆ ಒಟ್ಟು 03 ತುರ್ತು ಚಿಕಿತ್ಸಾ ವಿಭಾಗಗಳನ್ನು ಹೊಂದಿರುತ್ತದೆ.<br>
ಅಲ್ಲದೆ, General Medicine Paediatrics, TB Chest Dermatology, Psychiatry, General Surgery, Orthopaedics, OBG,</td></tr>
</table>

<table>
<tr>
<td></td>
<td>ಕೈಗೊಳ್ಳವುದೇ; (ಸಂಪೂರ್ಣ ವಿವರ ನೀಡುವುದು)</td>
<td>Anesthesiology, Radiology, Dentistry, Neurosurgery, Urology Paediatric Surgery, Plastic surgery, Surgical Gastro Enterology, Medical Gastro Enterology, Neurology, Nephrology ಮತ್ತು Endocrinology ಈ ಎಲ್ಲಾ ವಿಭಾಗಗಳಲ್ಲಿ ನುರಿತ ವೈದ್ಯರು, ಶುಶ್ರೂಷಾಧಿಕಾರಿಗಳು ಅಗತ್ಯ ಸಿಬ್ಬಂದಿಗಳಿದ್ದು, ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ದಿನದ 24 ಘಂಟೆಗಳಲ್ಲಿಯೂ 3 ಪಾಳಿಯಲ್ಲಿ ರೋಗಿಗಳಿಗೆ ತೊಂದರೆಯಾಗದಂತೆ ಚಿಕಿತ್ಸೆಯಲ್ಲಿ ವಿಳಂಭವಾಗದಂತೆ ಕಾಲ ಕಾಲಕ್ಕೆ ಸೇವೆ ನೀಡಲಾಗುತ್ತಿದೆ. ಬಿಮ್ಸ್ ಸಂಸ್ಥೆಯಲ್ಲಿ NICU, PICU, Medical ICU, Surical ICU, TCC-ICU, SSH-ICU ಸೌಲಭ್ಯಗಳು ಲಭ್ಯವಿರುತ್ತದೆ.<br>ರೋಗಿಗಳ ಅನುಕೂಲಕ್ಕಾಗಿ ಅಂಬುಲೆನ್ಸ್ ಹಾಗೂ ಸಂಸ್ಥೆಯ ಆವರಣದಲ್ಲಿ ಎಲೆಕ್ಟ್ರಿಕ್ ವಾಹನಗಳ ಸೇವೆಯನ್ನು ಒದಗಿಸಲಾಗಿರುತ್ತದೆ.</td>
</tr>
<tr>
<td>ಇ</td>
<td>ಕಲಬುರಗಿ ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರು ಅಥವಾ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಮತ್ತು ಯಾವ ಕಾಲಮಿತಿಯೊಳಗೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು;</td>
<td>ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕಲಬುರಗಿಯಲ್ಲಿ (GIMS, TCC & SSH) ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಕಂಡಂತಿದೆ
<table>
<tr><th>ಕ್ರ.ಸಂ</th><th>ವೃಂದ</th><th>ಖಾಲಿ ಇರುವ ಹುದ್ದೆಗಳ ಸಂಖ್ಯೆ (ಖಾಯಂ/ಗುತ್ತಿಗೆ/ಹೊರ ಗುತ್ತಿಗೆ)</th></tr>
<tr><td>1</td><td>ಗ್ರೂಪ್-ಎ</td><td>58</td></tr>
<tr><td>2</td><td>ಗ್ರೂಪ್-ಬಿ</td><td>09</td></tr>
<tr><td>3</td><td>ಗ್ರೂಪ್-ಸಿ</td><td>97</td></tr>
<tr><td>4</td><td>ಗ್ರೂಪ್-ಡಿ</td><td>0</td></tr>
<tr><td colspan="2">ಒಟ್ಟು</td><td>164</td></tr>
</table>
ಖಾಲಿ ಇರುವ ಎ ವೃಂದದ ಹುದ್ದೆಗಳನ್ನು ಸಿಆಸುಇ 179 ಎಸ್‌ಎಲ್‌ಪಿ 2025, ದಿನಾಂಕ:06.03.2026ರ ಅರೆ ಸರ್ಕಾರಿ ಪತ್ರದಲ್ಲಿ ನೀಡಿರುವ ನಿರ್ದೇಶನದಂತೆ ಭರ್ತಿ ಮಾಡಲು ಕ್ರಮವಹಿಸಲಾಗುವುದು.<br>ವೈದ್ಯಕೀಯ ಶಿಕ್ಷಣ ಇಲಾಖೆಯ ರಾಜ್ಯ ವೇತನ ಶ್ರೇಣಿಯ ವಿವಿಧ ವೃಂದದಲ್ಲಿ ಖಾಲಿ ಇರುವ ಬಹುತೇಕ ಹುದ್ದೆಗಳು ಪದೋನ್ನತಿ ಮೂಲಕ ಭರ್ತಿಮಾಡಬೇಕಾದ ಹುದ್ದೆಗಳಾಗಿದ್ದು, ವೃಂದ ಮತ್ತು ನೇಮಕಾತಿ ನಿಯಮಗಳು ರಚನೆ ಪೂರ್ಣಗೊಂಡ ನಂತರ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಕ್ರಮವಹಿಸಲಾಗುವುದು. ಗ್ರೂಪ್-ಡಿ ವೃಂದದ ಹುದ್ದೆಗಳನ್ನು ಗುತ್ತಿಗೆ/ಹೊರಗುತ್ತಿಗೆ ಮೂಲಕ ಭರ್ತಿ ಮಾಡಲಾಗಿದೆ</td>
</tr>
<tr>
<td>ಈ</td>
<td>ಕಲಬುರಗಿ ಗುಲ್ಬರ್ಗಾ ವೈದ್ಯಕೀಯ ವಿಜ್ಞಾನ ಸಂಸ್ಥೆ ಆಸ್ಪತ್ರೆಯಲ್ಲಿ ಬಿಪಿ ಮತ್ತು ಸಕ್ಕರೆ ಖಾಯಿಲೆ ಇರುವವರಿಗೆ ಆಸ್ಪತ್ರೆಯಲ್ಲಿ ಸಿಗುತ್ತಿರುವ ಗುಳಿಗೆಗಳು ಯಾವುವು; ಪ್ರಸ್ತುತ ಗುಳಿಗೆಗಳು ಖಾಲಿಯಾಗಿದ್ದು, ಅದನ್ನು ತರಿಸಲು ಯಾವ ಕಾಲಮಿತಿಯೊಳಗೆ ಖಾಯಿಲೆದಾರರಿಗೆ ನೀಡಲಾಗುತ್ತದೆ? (ಸಂಪೂರ್ಣ ಮಾಹಿತಿ ನೀಡುವುದು)</td>
<td>ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕಲಬುರಗಿಯ ಆಸ್ಪತ್ರೆಗೆ ಆಗಮಿಸುವ ಬಿಪಿ ಮತ್ತು ಸಕ್ಕರೆ ಖಾಯಿಲೆ ಇರುವ ರೋಗಿಗಳಿಗೆ ಪ್ರಸ್ತುತ ಮಾತ್ರೆಗಳು ಲಭ್ಯವಿದ್ದು, ಲಭ್ಯವಿರುವ ಮಾತ್ರೆಗಳ ವಿವರ ಅನುಬಂಧದಲ್ಲಿ ಒದಗಿಸಲಾಗಿದೆ.</td>
</tr>
</table>

**ಸಂಖ್ಯೆ:** ಎಂಇಡಿ 184 ಎಂಎಂಸಿ 2026

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು.

"ಅನುಬಂಧ-"

| ಕ್ರ.ಸಂ. | ಬಿಪಿ | ಕ್ರ.ಸಂ. | ಸಕ್ಕರ ಖಾಯಿಲೆ |
|---|---|---|---|
| 01 | Tab.Amlodepine 5 mg | 01 | Tab.Pioglitazone 7.5 mg |
| 02 | Tab. Atenolol 50 mg | 02 | Tab.Glipmepride 1 mg |
| 03 | Tab.Clinedepine 5 mg | 03 | Tab.Glimepride 2 mg |
| 04 | Tab. Labetalol 100 mg | 04 | Tab.Glibenclamide 5 mg |
| 05 | Tab.metoprolol 25 mg | 05 | Tab.Metformin 500 mg |
| 06 | Tab.Metaprolol 50 mg | 06 | Tab.Vogibose 0.2 mg |
| 07 | Tab.Losartan Potassium 25 mg | 07 | Tab.Voglibose 0.3 mg |
| 08 | Tab.Losartan potassium 50 mg | 08 | Tab. Pioglitazone 7.5 mg |
| 09 | Tab.Nifedepine 10Mg | | |
| 10 | Tab.Ramipril 5 mg | | |
| 11 | Tab.Telmisartan 20 mg | | |
| 12 | Tab. Telmisartan 40 mg | | |

Assistant Director of Pharmacy
Gulbarga Institute of Medical Science
Hospital, Kalaburagi

Director
Gulbarga Institute of Medical Sciences
KALABURAGI - 585 105.